**ದಿನಾಂಕ 08.02.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ ಶ್ರೀ ಆರ್.ಬಿ.ಆರ್. ವಕೀಲರಿಂದಃ</u>**

1. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರುತ್ತದೆ. ನಾನು ದ್ವಿತೀಯ ಪಿ.ಯು.ಸಿ ವರೆಗೂ ವ್ಯಾಸಾಂಗ ಮಾಡಿದ್ದೇನೆ. ನನ್ನ ಪ್ರತಿವಾದ ಪತ್ರ ಮತ್ತು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ತಿಳಿದುಕೊಂಡಿದ್ದೇನೆ. ನನ್ನ ಪ್ರತಿವಾದ ಪತ್ರ ಮತ್ತು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳನ್ನು ನಾನೇ ತಿಳಿಸಿದ್ದೇನೆ ಈ ಪ್ರಕರಣದ ಪ್ರತಿಯೊಂದು ವಿಚಾರವೂ ನನಗೆ ತಿಳಿದಿದೆ. ರಂಗಪ್ಪ ನನ್ನ ತಾತ. ರಂಗಪ್ಪನಿಗೆ ಒಟ್ಟು 7 ಜನ ಮಕ್ಕಳು, ಅದರಲ್ಲಿ 6 ಜನ ಗಂಡು ಮಕ್ಕಳು ಮತ್ತು 1 ಹೆಣ್ಣುಮಗು. ಅವರುಗಳೆಂದರೆ ರಾಮಲಿಂಗಪ್ಪ, ಲಕ್ಷ್ಮಣ, ರಂಗನಾಥ, ಲಿಂಗರಾಜು, ಕೃಷ್ಣಪ್ಪ ಮತ್ತು ಹುಚ್ಚಪ್ಪ ಎಂದರೆ ಸರಿ. ಅವರೇ ಈ ದಾವೆಯ ವಾದಿಗಳು ಎಂದರೆ ಸರಿ.

2. ದಾವಾ ಸ್ವತ್ತುಗಳು ಜಂಟಿ ಕುಟುಂಬದ ಸ್ವತ್ತುಗಳು ಎಂದರೆ ಸರಿ. ದಾವಾ ಐಟಂ ನಂ.1 ರ ಆಸ್ತಿಯ ಒಟ್ಟು ವಿಸ್ತೀರ್ಣ 3 ಎಕರೆ 6 ಗುಂಟೆ. ದಾವಾ ಐಟಂ ನಂ.2 ರ ಒಟ್ಟು ವಿಸ್ತೀರ್ಣ 3 ಎಕರೆ. ಸರ್ವೆ ನಂ. 106 ರ ಒಟ್ಟು ವಿಸ್ತೀರ್ಣ 6 ಎಕರೆ 6 ಗುಂಟೆ. ಸರ್ವೆ ನಂ. 106 ರ ಚಕ್ಕು ಬಂದಿ ನನಗೆ ಗೊತ್ತಿದೆ. ಪೂರ್ವಕ್ಕೆ ಚಂಗಾವರ ರಸ್ತೆ ಮತ್ತು ಕಲ್ಲುಕೋಟೆ ಕೆರೆ ಅಂಗಳ, ಪಶ್ಚಿಮಕ್ಕೆ ಕಲ್ಲುಕೋಟೆ ರಾಮಣ್ಣನ ಜಮೀನು, ಉತ್ತರಕ್ಕೆ ಕಲ್ಲುಕೋಟೆ ರಂಗಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಪುಟ್ಟಾಮಯ್ಯನ ಜಮೀನು ಇದೆ. ಸರ್ವೆ ನಂ. 106/1 ರ ಚಕ್ಕು ಬಂದಿ, ಪೂರ್ವಕ್ಕೆ ಚಂಗಾವರ ರಸ್ತೆ ಮತ್ತು ಕಲ್ಲುಕೋಟೆ ಕೆರೆ ಅಂಗಳ, ಪಶ್ಚಿಮಕ್ಕೆ ತಿಮ್ಮಕ್ಕನ ಜಮೀನು, ಉತ್ತರಕ್ಕೆ ಕಲ್ಲುಕೋಟೆ ರಂಗಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಪುಟ್ಟಾಮಯ್ಯನ ಜಮೀನು ಇದೆ. ಸರ್ವೆ ನಂ. 106/2 ರ ಚಕ್ಕು ಬಂದಿ, ಪೂರ್ವಕ್ಕೆ ಮನೋಜ್ ಉದಯ್ ರವರ ಜಮೀನು, ಪಶ್ಚಿಮಕ್ಕೆ ಕಲ್ಲುಕೋಟೆ ರಾಮಣ್ಣನವರ ಜಮೀನು, ಉತ್ತರಕ್ಕೆ ಕಲ್ಲುಕೋಟೆ ರಂಗಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಪುಟ್ಟಾಮಯ್ಯನ ಜಮೀನು ಇದೆ.

3. ದಾವಾ ಐಟಂ ನಂ.2 ರ ಆಸ್ತಿಯು ಪ್ರಸ್ತುತ ತಿಮ್ಮಕ್ಕನ ಹೆಸರಿನಲ್ಲಿ ಇದೆ. ತಿಮ್ಮಕ್ಕ ವಾದಿ ಮತ್ತು 1 ನೇ ಪ್ರತಿವಾದಿಯ ತಾಯಿ ಎಂದರೆ ಸರಿ. ದಾವಾ ಐಟಂ ನಂ.1 ರ ಜಮೀನು ನನ್ನ ಮತ್ತು ನನ್ನ ತಮ್ಮ ಉದಯ್ ಹೆಸರಿನಲ್ಲಿ ಇದೆ. ದಾವಾ ಐಟಂ ನಂ.1 ರ ಆಸ್ತಿಯು ನನಗೂ ಮತ್ತು

ನನ್ನ ತಮ್ಮನಿಗೂ ವಿಲ್ ನಾಮೆಯ ಮುಖಾಂತರ ನನ್ನ ತಾತ ಕೊಟ್ಟಿದ್ದರು. ತಲಾ 1 ಎಕರೆ 20 ಗುಂಟೆ ಯಂತೆ ವಿಲ್ ಮಾಡಿದ್ದರು. ನನ್ನ ತಾತ ವಿಲ್ ಮಾಡಿದ ಕಾಲಕ್ಕೆ ನನಗೆ 3-4 ವರ್ಷ ವಯಸ್ಸಿರಬಹುದು. ಸದರಿ ವಿಲ್ ನಲ್ಲಿ ನನ್ನ ವಯಸ್ಸನ್ನು ನಮೂದು ಮಾಡಲಾಗಿದೆಯಾ ಎಂದರೆ ನಮೂದಾಗಿದೆ. ಎಷ್ಟು ವರ್ಷ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ 4 ವರ್ಷ ಮತ್ತು ನನ್ನ ತಮ್ಮ ಉದಯ್ ಗೆ ಮೂರು ವರ್ಷ ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ವಿಲ್ ಮಾಡುವ ಕಾಲಕ್ಕೆ ನನ್ನ ತಾತನಿಗೆ ಸುಮಾರು 65-70 ವರ್ಷ ವಯಸ್ಸಾಗಿತ್ತು.

4. ವಿಭಾಗವಾಗುವ ಕಾಲಕ್ಕೆ ನನ್ನ ತಾತ ಮತ್ತು ತಂದೆಗೆ ಎಷ್ಟು ವಯಸ್ಸು ಎಂದು ಹೇಳಲು ಸಾಧ್ಯವಿಲ್ಲ. ವಿಲ್ ಮಾಡುವ ಕಾಲಕ್ಕೆ ತಿಮ್ಮಕ್ಕನಿಗೆ 65 ವರ್ಷ ವಯಸ್ಸಾಗಿತ್ತು. ನನ್ನ ಅಜ್ಜಿ ತಿಮ್ಮಕ್ಕನವರು ವಾದಿ ಮತ್ತು 1 ನೇ ಪ್ರತಿವಾದಿಗೆ ದಾವಾ ಐಟಂ ನಂ.2 ರ ಆಸ್ತಿಯಂತೆ ವಿಲ್ ಮಾಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ರ ಆಸ್ತಿಗೆ ಸಂಬಂಧಿಸಿದಂತೆ ಎಷ್ಟು ವಿಲ್ ಆಗಿದೆ ಎಂದರೆ ಸಾಕ್ಷಿಯು ನನಗೂ ಮತ್ತು ನನ್ನ ಅತ್ತೆ ಲಲಿತ ರವರಿಗೆ ಸಂಬಂಧಿಸಿದಂತೆ ಮಾತ್ರ ವಿಲ್ ಆಗಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಗೆ 6 ಬಾರಿ ವಿಲ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಮಗೆ ಮಾಡಿರುವಂಹತ ವಿಲ್ ಎಷ್ಟನೇ ವಿಲ್ ಎಂದರೆ ಸಾಕ್ಷಿಯು ನಾನು, ನನ್ನ ತಮ್ಮ ಮತ್ತು ನನ್ನ ಅತ್ತೆ ಲಲಿತಾ ರವರಿಗೆ ಮಾಡಿರುವ ವಿಲ್ ಮೊದಲನೆಯದ್ದಾಗಿದೆ ಎಂದು ನುಡಿಯುತ್ತಾರೆ.

5. 07.04.2000 ನೇ ಸಾಲಿನಲ್ಲಿ ನನ್ನ ತಾತ ತೀರಿಕೊಂಡಿದ್ದಾರೆ. ನನ್ನ ತಾತ ತೀರಿಕೊಂಡ ನಂತರ ಸರ್ವೆ ನಂ. 106 ರ ಜಮೀನು ನನ್ನ ಅಜ್ಜಿಯ ಹೆಸರಿಗೆ ಪವತಿ ವಾರಸು ಮೇರೆಗೆ ಖಾತೆಯಾಗಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ನನ್ನ ಅಜ್ಜಿ ತಿಮ್ಮಕ್ಕನವರು ನನ್ನ ತಾತ ರಂಗಪ್ಪನವರು ತೀರಿಕೊಂಡ ನಂತರ ಸರ್ವೆ ನಂ. 106 ರ ಪಾವತಿ ವಾರಸು ಮೇರೆಗೆ ಅವರ ಹೆಸರಿಗೆ ಬದಲಾಯಿಸುವಂತೆ ತಹಶೀಲ್ದಾರರಿಗೆ ಅರ್ಜಿಯನ್ನು ಕೊಟ್ಟಿದ್ದಾರೆ ಎಂದರೆ ಸರಿ. ನಾನು ಈಗ ನೋಡುತ್ತಿರುವ ಅದೇ ಅರ್ಜಿ ಎಂದರೆ ಸರಿ. ಸಾಕ್ಷಿ ಸದರಿ ದೃಢೀಕೃತ ಪ್ರತಿಯ ಅರ್ಜಿಯನ್ನು ಗುರುತಿಸಿದ್ದು, **ಸದರಿ ಅರ್ಜಿಯ ದೃಢೀಕೃತ ಪ್ರತಿಯನ್ನು ನಿ.ಪಿ.23 ಎಂದು**

**ಗುರುತಿಸಲಾಯಿತು.** ನನ್ನ ತಾತ ರಂಗಪ್ಪನವರು ಜೀವಂತವಾಗಿದ್ದಾಗ ಮಕ್ಕಳ ಜೊತೆ ಇರದೇ ನನ್ನ ಅಜ್ಜಿ ಮತ್ತು ನನ್ನ ತಾತ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿ.

6. 1990 ರಲ್ಲಿ ದಾವಾ ಆಸ್ತಿಯನ್ನು ವಾದಿಗಳು ಮತ್ತು 1 ನೇ ಪ್ರತಿವಾದಿಯು ಪ್ರತ್ಯೇಕವಾಗಿ ಭಾಗ ಮಾಡಿಕೊಂಡಿದ್ದು, ಯಾರು ಯಾರಿಗೆ ಯಾವ ಆಸ್ತಿ ಬಂದಿದೆ ಎಂದು ಹೇಳಲು ನನಗೆ ಸಾಧ್ಯವಾಗುವುದಿಲ್ಲ. ವಿಭಾಗ ಪತ್ರವನ್ನು ಮಾಡಿಕೊಂಡಿರುವ ಕಾರಣ ಅದನ್ನು ನೋಡಿ 1990 ರಲ್ಲಿ ವಿಭಾಗವಾಗಿದೆ ಎಂದು ಹೇಳಿದ್ದೇನೆ. ಎಷ್ಟು ವಿಸ್ತೀರ್ಣ ಯಾರು ಯಾರಿಗೆ ಬಂದಿದೆ ಎಂದು ಗೊತ್ತಿದೆ, ಆದರೆ ಅವುಗಳ ಸರ್ವೆ ನಂಬರ್ ಗಳು ಗೊತ್ತಿಲ್ಲ. ವಿಲ್ ಮುಖಾಂತರ ನನ್ನ ಹೆಸರಿಗೆ ಆದಂತಹ ಖಾತೆ ಪಹಣಿಯನ್ನು ರಾಮಲಿಂಗಪ್ಪನವರ ಮಗ ಮಹೇಶ್ ಎ.ಸಿ. ಮಧುಗಿರಿಯವರ ಮುಂದೆ ಆರ್.ಆರ್.ಟಿ. 60/2017-18 ರಂತೆ ದಾವಾ ಐಟಂ ನಂ.1 ರ ಆಸ್ತಿಗೆ ಪ್ರಶ್ನೆ ಮಾಡಿದ್ದರು ಎಂದರೆ ಸರಿ.

7. ದಾವಾ ಐಟಂ ನಂ.1 ಮತ್ತು 2 ರ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿಯು ನಮ್ಮ ತಾತನ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನನ್ನ ತಾತ ಜೀವಂತವಿರುವ ಕಾಲದಲ್ಲಿ ಯಾವುದೇ ರೀತಿಯ ವಿಲ್ ಮಾಡಿಲ್ಲ ಎಂದರೆ ಸಾಕ್ಷಿಯು ನನಗೂ ಮತ್ತು ನನ್ನ ತಮ್ಮ ಉದಯ್ ರವರಿಗೂ ವಿಲ್ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**